# ಶಿಕ್ಷಾರೂಪಿ ದಕ್ಷ ಪ್ರಜಾಪತಿ

ದಕ್ಷಯಜ್ಞ ಪೌರಾಣಿಕ ಕತೆಯಲ್ಲಿ ದಕ್ಷ ಪ್ರಜಾಪತಿ ಕೈಗೊಂಡ ಮಹಾಯಾಗಕ್ಕೆ ಶಿವನಿಗೆ ಆಮಂತ್ರಣ ಹೋಗುವುದಿಲ್ಲ. ಸುದ್ದಿ ತಿಳಿದ ಶಿವನ ಹೆಂಡತಿಯೂ, ದಕ್ಷ ಪ್ರಜಾಪತಿಯ ಮಗಳೂ ಆದ ದಾಕ್ಷಾಯಣಿ ಶಿವನ ಆಜ್ಞೆಯನ್ನು ಮೀರಿ ದಕ್ಷಯಜ್ಞದಲ್ಲಿ ಪಾಲ್ಗೊಳ್ಳುತ್ತಾಳೆ. ಅಲ್ಲಿ ಮಗಳ ಕಡೆ ತಿರುಗಿಯೂ ನೋಡದ ದಕ್ಷ ಯಜ್ಞದಲ್ಲಿ ಶಿವನಿಗೆ ಹವಿಸ್ಸನ್ನು ಕೊಡುವುದಿಲ್ಲ. ಇದರಿಂದ ಕ್ರೋಧಿತಳಾದ ದಾಕ್ಷಾಯಣಿ ತನ್ನ ಗಂಡನಿಗಾದ ಅವಮಾನವನ್ನು ಸಹಿಸದೆ ಯಜ್ಞಕುಂಡಕ್ಕೆ ಹಾರುತ್ತಾಳೆ. ಇದನ್ನು ತಿಳಿದ ಶಿವ ರೌದ್ರಾವತಾರ ತಾಳಿ ವೀರಭದ್ರನನ್ನು ಗಣಸಮೇತ ದಕ್ಷನಲ್ಲಿಗೆ ಕಳುಹಿಸುತ್ತಾನೆ. ಅಲ್ಲಿ ದಕ್ಷ ಪ್ರಜಾಪತಿಯ ಶಿರಚ್ಛೇದನವಾಗುತ್ತದೆ. ಮುಂದೆ ಶಾಂತನಾದ ಶಿವ ಕರುಣೆತೋರಿ ಉತ್ತರಾಭಿಮುಖವಾಗಿ ಮಲಗಿದ ಟಗರಿನ ಶಿರದಿಂದ ದಕ್ಷನಿಗೆ ಜೀವದಾನ ನೀಡುತ್ತಾನೆ. ಹೀಗೆ ಶಿಕ್ಷೆಗೊಳಗಾಗಿ ಟಗರಿನ ತಲೆಯೊಂದಿಗೆ ಮರುಜನ್ಮ ಪಡೆದ ದಕ್ಷ ಪ್ರಜಾಪತಿಯ ಅಪರೂಪದ ಸುಂದರ ಉಬ್ಬುಶಿಲ್ಪ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕೆಳದಿಯ ವೀರಭದ್ರಸ್ವಾಮಿ ದೇವಾಲಯದ ಆವರಣದಲ್ಲಿದೆ.

**■ ಧರ್ಮಾನಂದ ಶಿರ್ವ, ಬೆಂಗಳೂರು**





# ಶಿಲ್ಪಿಯ ಕಲಾ ಪ್ರೌಢಿಮೆ

ಬೆಂಗಳೂರಿನ ಆಡುಗೋಡಿಯಲ್ಲಿರುವ ಶಿಲ್ಪಿ ಮಂಜುನಾಥಾಚಾರ್ ಅವರ ಮನೆಗೆ ಹೋಗಿದ್ದಾಗ ಕಂಡ ಶಿಲ್ಪವಿದು. ಅವರು ಹದಿನಾರು ವರ್ಷ ವಯಸ್ಸಿನವರಾಗಿದ್ದಾಗ ಕೆತ್ತಿದ ನಾಟ್ಯರಾಣಿ ಶಾಂತಲೆಯ ಶಿಲ್ಪವಿದು. ಒಂದು ಅಡಿ ಎತ್ತರವಿರುವ ಈ ಶಿಲ್ಪವನ್ನು ಕರಿಕಲ್ಲಿನಲ್ಲಿ ಕೆತ್ತಲಾಗಿದ್ದು, ಕುಸುರಿ ಕೆಲಸಕ್ಕೆ ಆದ್ಯತೆ ನೀಡಲಾಗಿದೆ. ಈ ಶಿಲ್ಪದ ಮತ್ತೊಂದು ವಿಶೇಷವೆಂದರೆ, ಕಾಲಂದುಗೆಯನ್ನು ಸರಾಗವಾಗಿ ಮೇಲೆ ಕೆಳಗೆ ಸರಿಸಬಹುದಾಗಿದೆ. ಪ್ರಸ್ತುತ 48 ವರ್ಷ ವಯಸ್ಸಾಗಿರುವ ಮಂಜುನಾಥಾಚಾರ್, ವಿವಿಧ ರೀತಿಯ ಶಿಲ್ಪಗಳನ್ನು ಕೆತ್ತುವ ನೈಪುಣ್ಯತೆಯನ್ನು ಪಡೆದಿದ್ದಾರೆ.

**■ ಜಿ. ನಾಗೇಂದ್ರ, ಮಂಗಳೂರು**

# ದೈತ್ಯ ಫ್ಯಾನ್!

ಗೋವಾ ವಿಮಾನ ನಿಲ್ದಾಣ ಪೋರ್ಚುಗೀಸರಿಂದ 1955ರಲ್ಲಿ ನಿರ್ಮಾಣಗೊಂಡಿತು. ಚೆಕ್ ಇನ್ ಆದ ಮೇಲೆ ಪ್ರಯಾಣಿಕರು ತಂಗಲು ಇರುವ ವಿಶಾಲವಾದ ನಿರೀಕ್ಷಣಾ ಕೋಠಡಿಯಲ್ಲಿ ಮೂರು ದೈತ್ಯ ಫ್ಯಾನುಗಳಿವೆ. ಒಂದೊಂದು ಫ್ಯಾನಿಗೆ ಐದು ರೆಕ್ಕೆಗಳಿವೆ. ಒಂದೊಂದು ರೆಕ್ಕೆ ಹನ್ನೆರಡು ಅಡಿ ಉದ್ದ ಇದೆ. ಈ ಮೂರೇ ಫ್ಯಾನುಗಳು ಇಡೀ ಕೊಠಡಿಗೆ ಗಾಳಿ ಬೀಸುತ್ತವೆ. ಸ್ವಲ್ಪವೂ ಶಬ್ದ ಮಾಡುವುದಿಲ್ಲ. 24 ಗಂಟೆ ಕೆಲಸ ಮಾಡುತ್ತಿದ್ದರೂ ಅವು ಈವರೆಗೂ ರಿಪೇರಿಗೆ ಬಂದಿಲ್ಲ ಎಂದು ಅಲ್ಲಿಯ ಸಿಬ್ಬಂದಿ ಹೆಮ್ಮೆಯಿಂದ ಹೇಳುತ್ತಾರೆ.

**■ ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ**

